ಮರುದಿನ ಪಾರ್ಲರಿನಲ್ಲಿ ಗೆಳತಿಯರಿಬ್ಬರೂ ಜೊತೆಯಾಗಿ ಕುಳಿತು ಮುಖ, ಕೈಕಾಲಿನ ಉಪಚಾರ ಮಾಡಿಸಿಕೊಳ್ಳುತ್ತಿದ್ದಾಗಲೂ ಅವರ ಮಾತು ಮುಗಿದಿರಲಿಲ್ಲ. ಮೆದುಸ್ವರದಲ್ಲಿ ಮುಂದುವರಿದೇ ಇತ್ತು, ಮುಚ್ಚಿದ ಕಣ್ಣುಗಳ ಮೇಲೆ ಮುಳ್ಳುಸೌತೆಯ ಗೋಲಗಳನ್ನಿಟ್ಟುಕೊಂಡು ಒರಗಿದ್ದಾಗಲೂ ಶಮಾ ಪಿಸುಗುಟ್ಟುತ್ತಿದ್ದಳು...

ಅಷ್ಟಾದರೂ ಇವನನ್ನೇ ಮದುವೆಯಾಗಬೇಕೆಂಬ ಭಾವ ಬರಲಿಲ್ಲವಂತೆ. ಪ್ರಜ್ಞಾಪೂರ್ವಕವಾಗಿ ಇಬ್ಬರೂ ಮಾತನಾಡಿ ನಿರ್ಣಯಕ್ಕೆ ಬರಬೇಕಾಯಿತಂತೆ.

'ಮುಖ್ಯವಾಗಿ ಪವನ, ನಮ್ಮಿಬ್ಬರಿಗೆ – ಒಬ್ಬರೊಡನೊಬ್ಬರಿಗೆ ಹಿತವೆನಿಸುತ್ತದೆ, ಅಷ್ಟೆ. ಹಾಗೆ ನಮ್ಮ ಅಭಿಪ್ರಾಯಗಳಾಗಲೀ, ಯೋಚನೆಗಳಾಗಲೀ ಒಂದೇ ಎಂದು ನಾನು ಹೇಳಲಿಕ್ಕಿಲ್ಲ. ನಿಂಗೆ ಕೇಳಿದರೆ ಆಶ್ಚರ್ಯ ಆಗಬಹುದು. ಇವತ್ತು ಬೆಳಗ್ಗೆ ಸಾ ನಮಗೆ ಜಗಳ ಆಯ್ತು. ಎಲ್ಲೀವರೆಗೆ ಅಂದ್ರೆ, ನಂಗೆ ಕಣ್ಣಲ್ಲಿ ನೀರು ಬರುವವರೆಗೆ ಆಯ್ತು. ಅಮ್ಮನಿಗೂ, ಅಪ್ಪನಿಗೂ ಗಾಬರಿಯಾಗಿ... ಏನಿಲ್ಲ ಬಿಡು...' ಎಂದು ಅವಳು ನಕ್ಕಳು.

ಮಾತಿನ ನಡುವೆ ಶಮಾ, 'ಏ ಯಾರೆಲ್ಲ ಬರ್ತಾರೆ ಗೊತ್ತುಂಟಾ?' ಎನ್ನುತ್ತ, 'ನಿಂಗೆ ಆ ಸಾಲಿಯಾನ್ ನೆನಪುಂಟಾ? ಅವ ಬರ್ತಾನಂತೆ.'

'ಯಾರು? ದೀಪಕ್?'

'ಹೂಂ!!?' ಎಂದು ಶಮಾ ಹುಬ್ಬು ಮೇಲೆತ್ತಿ ಕುಣಿಸಿದಳು.

'ಏನು ಹೇಳುವುದು ನೀನು?' ಆಕ್ಷೇಪಣೆಯ ದನಿಯಲ್ಲಿ ಪವನ ಕೇಳಿದಳು.

'ಯಾಕೆ? ಏನಾಯ್ತು? ಮಾತನಾಡಿ ನೋಡು. ಅವನಿಗೂ ನೀನು ಬರುವ ಬಗ್ಗೆ ಸೂಚನೆ ಹೋಗಿದೆ.' ಎಂದು ಕಣ್ಣು ಮಿಟುಕಿಸಿದಳು.

ಅಷ್ಟರಲ್ಲಿ ಮದುಮಗ ಬಂದ ಎಂಬ ಗುಲ್ಲೆದ್ದಿತು.

ಆತ ನಲ್ವತ್ತೈದರ ಆಸುಪಾಸಿನಲ್ಲಿದ್ದಂತೆ ತೋರಿತು. ಇಲ್ಲ, ಎದುರಿನ ಕೂದಲು ಹಿಂದೆ ಸರಿದುದರಿಂದ ಹಾಗೆ ಕಾಣುತ್ತಿರಬೇಕು ಎಂದುಕೊಂಡಳು ಪವನ. ಪರಿಚಯ, ಮಾತುಕತೆ ಸಾಗಿದ್ದಂತೆ ಶಮಾಳ ಅಮ್ಮ ಊಟಕ್ಕೆಬ್ಬಿಸಿದರು.

ಮರುದಿನ ಪಾರ್ಲರಿನಲ್ಲಿ ಗೆಳತಿಯರಿಬ್ಬರೂ ಜೊತೆಯಾಗಿ ಕುಳಿತು ಮುಖ, ಕೈಕಾಲಿನ ಉಪಚಾರ ಮಾಡಿಸಿಕೊಳ್ಳುತ್ತಿದ್ದಾಗಲೂ ಅವರ ಮಾತು ಮುಗಿದಿರಲಿಲ್ಲ. ಮೆದುಸ್ವರದಲ್ಲಿ ಮುಂದುವರಿದೇ ಇತ್ತು, ಮುಚ್ಚಿದ ಕಣ್ಣುಗಳ ಮೇಲೆ ಮುಳ್ಳುಸೌತೆಯ ಗೋಲಗಳನ್ನಿಟ್ಟುಕೊಂಡು ಒರಗಿದ್ದಾಗಲೂ ಶಮಾ ಪಿಸುಗುಟ್ಟುತ್ತಿದ್ದಳು, 'ಯಾರೋ ಸರದಾರ ಕುದುರೆ ಮೇಲೆ ಕುಳಿತು ಬರುತ್ತಾನೆ ಅಂತ ಕಾಯುವುದನ್ನು ಬಿಟ್ಟೆ ನೋಡು ಪವನ, ಆಮೇಲೆ ಇದೆಲ್ಲ... ಮೊದಲ ನೋಟದ ಪ್ರೇಮ, ಛಕ್ಕನೆ ಹುಟ್ಟಿಕೊಳ್ಳುವ ಪ್ರೀತಿ... ನಮಗೆ ಹುಚ್ಚಲ್ಲವೇ?!...'

ಸಂಜೆ ಹಲಕೆಲವು ಗೆಳೆಯ–ಗೆಳತಿಯರು ಸಿಕ್ಕಿದರು. ಮೇಲಿಂದ ಮೇಲೆ 'ಹಾಯ್, ಹೋಯ್, ಹೇ' ಎಂಬ ಬೊಬ್ಬೆಯೊಡನೆ, ಒಬ್ಬರಿನ್ನೊಬ್ಬರನ್ನು ಕರೆದು, ಕೂಗಿ, ಗಲಾಟೆ ಮಾಡಿದರೂ, ಒಳಗಿನ ಹಂತದಲ್ಲಿ ಅಂತಹ ಯಾವ ಆತ್ಮೀಯ ನೆಲೆಯ ಸಂಬಂಧವೂ ಬೆಸೆದಂತೆನಿಸಲಿಲ್ಲ. ದೀಪಕ್ ಸಾಲಿಯಾನನೂ ಬಂದಿದ್ದ. ಬೆಂಗಳೂರಿನ ಐಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅವನು